# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 32 | Pages. 2 | Date: 30-12-2025, TUESDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 32 - ಪುಟಗಳು : 2 30-12-2025 ಮಂಗಳವಾರ Ph: 8762954248 ದರ : ₹1


# ಸಮಾವೇಶದಿಂದಲೇ ಕಾಂಗ್ರೆಸ್‌ಗೆ ಪ್ರತಿಕ್ರಿಯೆ ನೀಡುವೆ

## ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಶಪಥ | ಹಾಸನದಲ್ಲಿ ಕಾರ್ಯಕರ್ತರ ಸಮಾವೇಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜೆಡಿಎಸ್ ಭದ್ರಕೋಟೆ ಹಾಸನ ಜಿಲ್ಲೆಯ ಮೇಲೆ ಕಣ್ಣಿಟ್ಟು ಎರಡು ಸಮಾವೇಶ ಮಾಡಿರುವ ಕಾಂಗ್ರೆಸ್‌ಗೆ ಅವರಿಗಿಂತ ದೊಡ್ಡ ಮಟ್ಟದಲ್ಲಿ ಕಾರ್ಯಕರ್ತರ ಸೇರಿಸಿ ಸಮಾವೇಶ ಮಾಡಿ ಶಕ್ತಿ ತೋರಿಸುತ್ತೇನೆ ಎಂದು ಪ್ರಧಾನಿ ಹೆಚ್.ಡಿ.ದೇವೇಗೌಡ ಸವಾಲು ಹಾಕಿದರು.

ಹುಟ್ಟೂರು ಹರದನಹಳ್ಳಿಯ ಮನೆ ದೇವರಿಗೆ ಸೋಮವಾರ ವಿಶೇಷ ಪೂಜೆ ಸಲ್ಲಿಸಿ ನಂತರ ನಗರದ ಜಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ಕಾಂಗ್ರೆಸ್‌ನವರು 30 ಜಿಲ್ಲೆ ಬಿಟ್ಟು ಹಾಸನದಲ್ಲೇ 2 ವರ್ಷಗಳಲ್ಲಿ 2 ಸಮಾವೇಶ ನಡೆಸಿರುವುದೇಕೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ಗೆ ಜಿಲ್ಲೆಯ ಮೇಲೇಕೆ ಇಷ್ಟು ದ್ವೇಷ. ನನಗೀಗ 93 ವರ್ಷ. ಕೊನೆಯ ಉಸಿರಿರುವವರೆಗೂ ಹೋರಾಟ ಮಾಡುತ್ತೇನೆ. ಕಾಂಗ್ರೆಸ್‌ನವರು ಮಾಡಿರುವ ಸಭೆಗಳಿಗಿಂತ ದೊಡ್ಡ ಮಟ್ಟದ ಸಭೆ ಮಾಡುತ್ತೇವೆ ಎಂದರು.

ನಾವು ಯಾವ ಸಮಾಜಕ್ಕೆ ಅನ್ಯಾಯ ಮಾಡಿದ್ದೇವೆ, ಯಾರಿಗೆ ಅನ್ಯಾಯವಾಗಿದೆ ಎಂದು ಹೇಳಲಿ. ಜಿಲ್ಲೆಯ ಪ್ರಗತಿಗೆ ರೇವಣ್ಣ ಮಾಡಿದ ಕೆಲಸಗಳ ಪಟ್ಟಿ ಈಗ ಕೊಡಲ್ಲ. ರೇವಣ್ಣ ವರ್ಚಸ್ಸು ಮುಗಿಸಲು ಏನೇನು ಬೇಕೋ ಮಾಡಿದರು. ಆದರೆ ಅವರ ಪ್ರಯತ್ನ ಸಫಲವಾಗಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇವಲ 3 ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದರೆ 14 ರಾಜ್ಯಗಳಲ್ಲಿ ಬಿಜೆಪಿ ಆಡಳಿತದಲ್ಲಿದೆ. ಅಧಿಕಾರಕ್ಕೆ ಅಂಟಿಕೊಂಡು ಕುಳಿತ ವ್ಯಕ್ತಿ ನಾನಲ್ಲ. ನನ್ನ ಜೀವನದ ಹೋರಾಟದ ದಾರಿಯೇ ನನ್ನ ರಾಜಕೀಯ ಎಂದು ಹೇಳಿದರು.



### ಮೈತ್ರಿ ಗೊಂದಲ ಬಗೆಹರಿಸಲು ಮನವಿ

ಅರಕಲಗೂಡು ಶಾಸಕ ಎ.ಮಂಜು ಮಾತನಾಡಿ, ಬಿಜೆಪಿ-ಜೆಡಿಎಸ್ ಮೈತ್ರಿ ಕುರಿತು ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಿದ್ದು, ಅದಕ್ಕೆ ಸ್ಪಷ್ಟ ನಿರ್ಧಾರ ಅಗತ್ಯವಿದೆ. ಮೈತ್ರಿ ಮುಂದುವರಿಸಬೇಕಾದರೆ ಎಲ್ಲ ಚುನಾವಣೆಯಲ್ಲೂ ಅದನ್ನು ಜಾರಿಗೊಳಿಸಬೇಕು. ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗೆ ಬಿಜೆಪಿ, ಜೆಡಿಎಸ್ ಸಮನ್ವಯ ಸಮಿತಿ ರಚಿಸಬೇಕೆಂದು ಮನವಿ ಮಾಡಿದರಲ್ಲದೆ, ಎಸ್‌ಸಿ-ಎಸ್‌ಟಿ ಸಮುದಾಯಕ್ಕೆ ಮೀಸಲಾದ ಹಣವನ್ನು ಅವರ ಅಭಿವೃದ್ಧಿಗೇ ಬಳಸಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

### ಪ್ರತೀಕಾರದ ರಾಜಕಾರಣ ನಮ್ಮದಲ್ಲ

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಅಭಿವೃದ್ಧಿ ಬದಲು ದ್ವೇಷದ ರಾಜಕಾರಣ ಮಾಡುತ್ತಿದೆ. ದ್ವೇಷ ಭಾಷಣದ ಬಿಲ್ ತಂದು ವಿರೋಧ ಪಕ್ಷಗಳನ್ನು ದಮನ ಮಾಡಲು ಹೊರಟಿದೆ ಎಂದು ಶಾಸಕ ಎಚ್.ಡಿ.ರೇವಣ್ಣ ಆರೋಪಿಸಿದರು.

ದೇವೇಗೌಡರ ಮೇಲೆ ಲೋಕಾಯುಕ್ತ ಹಾಗೂ ಸಿಓಡಿ ತನಿಖೆ ನಡೆಸಿ ಕೇಸ್ ಹಾಕಲಾಯಿತು. ಆದರೆ ದೇವರ ದಯೆಯಿಂದ ಅದರಿಂದ ಮುಕ್ತರಾದರು. ದೇವೇಗೌಡರು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದಿತ್ತು, ಆದರೆ, ಅವರು ಎಂದಿಗೂ ಪ್ರತೀಕಾರದ ರಾಜಕಾರಣ ಮಾಡಲಿಲ್ಲ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನಮ್ಮ ನಾಯಕರು. ದೇಶ ಉಳಿಯಬೇಕಾದರೆ ಮೋದಿ ಬೇಕು. ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಯಾಗಿದೆಯಾದರೂ ಹಾಸನ ಮಹಾನಗರಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕೈಜೋಡಿಸಿದ್ದು ಜಿಲ್ಲೆಯಲ್ಲಿ ಎರಡೂ ಪಕ್ಷಗಳು ಒಂದೇ ಎಂಬುದನ್ನು ತೋರಿಸುತ್ತದೆ ಎಂದು ಆರೋಪಿಸಿದರು.

ಹಾಸನ ಜಿಲ್ಲೆ ಭೂಮಾಫಿಯಾ ಹಾಗೂ ಲೂಟಿಕೋರರ ಕೈಗೆ ಸೇರಿದೆ. ಧೈರ್ಯ ಇದ್ದರೆ ತನಿಖೆ ನಡೆಸಿ ಕ್ರಮ ಕೈಗೊಳ್ಳಿ. ಕೇಸ್ ಹಾಕಿ ಹೆದರಿಸುತ್ತೇವೆ ಎಂದರೆ ನಾವು ಹೆದರಿ ಓಡಿ ಹೋಗುವುದಿಲ್ಲ. ಎರಡೂವರೆ ವರ್ಷಗಳಿಂದ ಎಲ್ಲವನ್ನೂ ಸಹಿಸಿಕೊಂಡಿದ್ದೇವೆ. ನಮ್ಮ ಕಾರ್ಯಕರ್ತರಿಗೆ ತೊಂದರೆ ಕೊಟ್ಟರೆ ಸುಮ್ಮನಿರುವುದಿಲ್ಲ. ಕಾನೂನು ಬಿಟ್ಟು ಕೆಲಸ ಮಾಡಿದರೆ ಒಂದು ದಿನ ತಕ್ಕ ಫಲ ಅನುಭವಿಸಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಹೇಳಿದರು.

ಜೆಡಿಎಸ್ ಪ್ರಾದೇಶಿಕ ಪಕ್ಷವಾದರೂ ಜನರ ಶಕ್ತಿಯಿಂದಲೇ ಉಳಿದಿದೆ. ನಮ್ಮ ಪಕ್ಷ ಅನೇಕ ಬಾರಿ ಒಡೆದು ಹೋದರೂ ಇಂದು ಕರ್ನಾಟಕ ಹಾಗೂ ರಾಷ್ಟ್ರ ಮಟ್ಟದಲ್ಲಿ ಜೆಡಿಎಸ್ ಅನ್ನು ಉಳಿಸಿ ಬೆಳೆಸಿದವರು ಕಾರ್ಯಕರ್ತರು. ಹಾಸನ ಜಿಲ್ಲೆ ನನ್ನನ್ನು ಬೆಳೆಸಿದ ನೆಲ. 1962 ರಿಂದ 2025ರ ವರೆಗೆ ಜಿಲ್ಲೆಯ ಜನರು ನಮ್ಮನ್ನು ಬೆಳೆಸಿದ್ದಾರೆ ಎಂದು ಸ್ಮರಿಸಿದರು.

ಹೆಚ್.ಡಿ. ಕುಮಾರಸ್ವಾಮಿ ಸಿಎಂ ಆಗಿದ್ದಾಗ 26 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿದರು. ಗ್ಯಾರಂಟಿ ಯೋಜನೆಗಳ ಬಗ್ಗೆ ಈಗ ಕಾಂಗ್ರೆಸ್ ಪಕ್ಷದವರೇ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ರಸ್ತೆ ನಿರ್ಮಾಣಕ್ಕೆ ಹಣವಿಲ್ಲ ಎಂದು ಅವರದೇ ನಾಯಕರು ಹೇಳುತ್ತಿದ್ದಾರೆ ಎಂದು ಟೀಕಿಸಿದರು.

ಮಾಜಿ ಶಾಸಕ ಎಚ್.ಕೆ. ಕುಮಾರಸ್ವಾಮಿ ಮಾತನಾಡಿ, ರಾಜ್ಯದಲ್ಲಿ 2,800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಶೇ.50ರಷ್ಟು ಭ್ರಷ್ಟಾಚಾರ ಇದೆ ಎಂಬ ಆರೋಪವನ್ನು ಉಪಲೋಕಾಯುಕ್ತರೇ ಮಾಡಿದ್ದಾರೆ ಎಂದರು.

ಸಂಘಟನೆ ಕೊರತೆಯಿಂದ ಕೆಲವು ಚುನಾವಣೆ ಸೋಲು ಕಂಡಿದ್ದರೂ ಮುಂದಿನ ದಿನಗಳಲ್ಲಿ ದೇವೇಗೌಡರ ನೇತೃತ್ವದಲ್ಲಿ ಪಕ್ಷ ಬಲವಾಗಿ ಎದುರಿಸಲಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಬಡವರು ಮತ್ತು ರೈತರ ಪರವಾಗಿ ಹೋರಾಡುತ್ತಿರುವ ಏಕೈಕ ಮಾಜಿ ಪ್ರಧಾನಿ ದೇವೇಗೌಡ ಎಂಬುದು ಹೆಮ್ಮೆಯ ಸಂಗತಿ. ಮುಂದಿನ ಅವಧಿಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು.

ಶಾಸಕ ಹೆಚ್.ಪಿ.ಸ್ವರೂಪ್ ಮಾತನಾಡಿ, ಮಾಜಿ ಪ್ರಧಾನಿ ದೇವೇಗೌಡರ ಮಾರ್ಗದರ್ಶನದಲ್ಲಿ ಜ.23ರಂದು ಹಾಸನದಲ್ಲಿ ನಡೆಯುವ ಬೃಹತ್ ಸಮಾವೇಶವನ್ನು ಯಶಸ್ವಿಗೊಳಿಸಲು ಕಾರ್ಯಕರ್ತರಿಗೆ ಮನವಿ ಮಾಡಿದರು.

ಮಾಜಿ ಸಚಿವ ಸಾ.ರಾ.ಮಹೇಶ್, ಎಂಎಲ್ಸಿ ಸೂರಜ್ ರೇವಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್, ತೋ.ಚ. ಅನಂತಸುಬ್ಬರಾವ್ ಇತರರು ಇದ್ದರು.

## ಗಣಿಗಾರಿಕೆ ಪರವಾನಗಿ ವಾಪಸ್‌ಗೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಹೊಳೆನರಸೀಪುರ ತಾಲ್ಲೂಕು ಶ್ರೀವುತದ ಕಾವಲು ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆ ಪರವಾನಗಿ ಹಿಂಪಡೆಯಬೇಕು ಎಂದು ಒತ್ತಾಯಿಸಿ ಗ್ರಾಮಸ್ಥರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸರ್ವೆ ನಂ. 6ರಲ್ಲಿ 15 ಎಕರೆ ಪ್ರದೇಶದಲ್ಲಿ ಕಲ್ಲುಪುಡಿ ಘಟಕ ಹಾಗೂ ಕಲ್ಲು ತೆಗೆಯಲು ಸ್ಥಳೀಯ ಪ್ರಭಾವಿ ವ್ಯಕ್ತಿಯೊಬ್ಬರು ಪರವಾನಗಿ ಪಡೆದಿದ್ದಾರೆ. ಕಾನೂನು ಪ್ರಕಾರ ಗಣಿಗಾರಿಕೆ ನಡೆಸಿದ್ದರೆ ನಮ್ಮ ಅಭ್ಯಂತರವಿರಲಿಲ್ಲ. ಆದರೆ, 15 ಎಕರೆಗೆ ಅನುಮತಿ ಪಡೆದು ಸುತ್ತಲಿನ 50ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಅಗೆಯಲಾಗಿದೆ. ಅಂದಾಜು 200 ಮೀಟರ್‌ನಷ್ಟು ಭೂಮಿ ಅಗೆದಿದ್ದು ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಕೂಡಲೇ ಈ ಘಟಕವನ್ನು ಬಂದ್ ಮಾಡಿಸಿ ಸುತ್ತಲಿನ ನಿವಾಸಿಗಳಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು ಎಂದು ಒತ್ತಾಯಿಸಿದರು.

2017ರ ಮಾ. 23 ರಂದು 20 ವರ್ಷಗಳ ವರೆಗೆ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ. ಆದರೆ, ಸರ್ಕಾರಿ ಅಧಿಕಾರಿಗಳು ಹಾಗೂ ತಜ್ಞರು ಗಣಿಗಾರಿಕೆಯಿಂದ ತೊಂದರೆಯಾಗುವ ಬಗ್ಗೆ ಅಧ್ಯಯನ ನಡೆಸಿಲ್ಲ. ಗಣಿಗಾರಿಕೆ ಮತ್ತು ಕಲ್ಲು ಪುಡಿ ಮಾಡುವಾಗ ಹೊರಬರುವ ದೂಳಿನ ಕಣಗಳು ಗಾಳಿಯಲ್ಲಿ ಬೆರೆತು ವಾಯುಮಾಲಿನ್ಯ ಉಂಟಾಗುತ್ತಿದೆ. ವಾಯು ಮಾಲಿನ್ಯ ತಡೆಗೆ ಜಾಗದಲ್ಲಿ ತಡೆಗೋಡೆ ನಿರ್ಮಿಸದೆ ಸರ್ಕಾರದ ನಿರ್ದೇಶನವನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆಯೆಂದು ಪ್ರತಿಭಟನಾಕಾರರು ಆರೋಪಿಸಿದರು.

ಘಟಕದಿಂದ ಸ್ವಲ್ಪ ದೂರದಲ್ಲಿ ಪ್ರಾಥಮಿ ಹಾಗೂ ಪ್ರೌಢಶಾಲೆ, ಹಾಸ್ಟೆಲ್ ಇದೆ. ವಿದ್ಯಾರ್ಥಿಗಳ ವ್ಯಾಸಂಗ ಹಾಗು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಹೇಮಾವತಿ ಬಲದಂಡೆ ನಾಲೆ ಕಾಲುವೆ ನಂ. 35ರಲ್ಲಿ ಕೃಷಿ ಚಟುವಟಿಕೆಗೆ ಹರಿಯುವ ನೀರನ್ನು ಕಲ್ಲು ಗಣಿಗಾರಿಕೆಗೆ ಬಳಸುತ್ತಿದ್ದು ಕೃಷಿಗೂ ಭಾರೀ ತೊಡಕಾಗಿದೆ. ಜೆಸಿಬಿ, ಹಿಟಾಚಿ ಮೂಲಕ ಬೆಟ್ಟ ಅಗೆಯುತ್ತಿರುವುದರಿಂದ ನೂರಾರು ಮರಗಳು ಹಾನಿಗೀಡಾಗಿವೆ. ದೂಳಿನಿಂದ ಕೃಷಿ ಭೂಮಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಅಂತರ್ಜಲ ಮಟ್ಟ ಕುಸಿದು ನೀರಾವರಿಗೆ ಭಾರೀ ತೊಂದರೆಯಾಗುತ್ತಿದೆಯೆಂದು ದೂರಿದರು.

ಗ್ರಾಮಸ್ಥರಾದ ಕುಮಾರ್, ಲೋಕೇಶ್, ಶ್ರೀನಿವಾಸ್, ವಾಸು, ಕುಮಾರ್, ಶಂಕರ್, ರಮೇಶ್ ಮತ್ತಿತರರಿದ್ದರು.

## ಬಾಳ್ಳುಪೇಟೆ ಬಳಿ ಸರ್ವಿಸ್ ರಸ್ತೆ ಕೆಲಸ ಶೀಘ್ರ ಆರಂಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ನಿರಂತರ ಅಪಘಾತ ಸಂಭವಿಸುತ್ತಿರುವ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಬಾಳ್ಳುಪೇಟೆಯಲ್ಲಿ 1.24 ಕಿ.ಮೀ. ಉದ್ದದ ಸರ್ವಿಸ್ ರಸ್ತೆ ಕಾಮಗಾರಿ ಶೀಘ್ರ ಪ್ರಾರಂಭವಾಗಲಿದೆ ಎಂದು ಶಾಸಕ ಸಿಮೆಂಟ್ ಮಂಜು ಭರವಸೆ ನೀಡಿದರು. ಬೆಂಗಳೂರು-ಮಂಗಳೂರು ಚತುಷ್ಪಥದಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜನಾ ನಿರ್ದೇಶಕರೊಂದಿಗೆ ಸೋಮವಾರ ಆಲೂರಿನಿಂದ ಮಾರನಹಳ್ಳಿ ವರೆಗೆ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಬಾಳ್ಳುಪೇಟೆ-ಜೆಪಿ ನಗರ ಮಧ್ಯದಲ್ಲಿ ಅಪಘಾತ ಹೆಚ್ಚುತ್ತಿದೆ. ಈ ವ್ಯಾಪ್ತಿಯಲ್ಲಿ ಬ್ಲಾಸಮ್, ಸಿದ್ದಣ್ಣಯ್ಯ ಹಾಗೂ ವಿವೇಕಾ ಕಾನ್ವೆಂಟ್ ಶಾಲೆಗಳಿವೆ. ಮಕ್ಕಳು ಮಾತ್ರವಲ್ಲದೆ ಎಲ್ಲರೂ ಅಪಾಯದಲ್ಲಿ ನಡೆದು ಹೋಗಬೇಕಾಗಿರುವುದರಿಂದ ಅಲ್ಲಿಗೆ ಒಂದು ಸರ್ವಿಸ್ ರಸ್ತೆ ಬೇಕು ಎಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡಲಾಗಿತ್ತು. ಈ ಕಾಮಗಾರಿಗೆ ಅನುಮೋದನೆ ಸಿಕ್ಕಿದ್ದು ಕಾಮಗಾರಿ ಶುರುವಾಗುತ್ತದೆ. ಶಾಲೆಗಳಿರುವ ಇದೇ ಪ್ರದೇಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಸ್ಕೈ ವಾಕ್ ನಿರ್ಮಾಣ ಮಾಡುವಂತೆಯೂ ಮನವಿ ಸಲ್ಲಿಸಲಾಗಿದೆ ಎಂದರು.

ಮಳಲಿ, ಕೌಡಹಳ್ಳಿ ಸಂಪರ್ಕ ಕಲ್ಪಿಸುವ ಜಾಗಗಳಲ್ಲಿಯೂ ಅಪಘಾತ ಸಂಭವಿಸುತ್ತಿವೆ. ಈ ಎರಡೂ ಕಡೆ ಸೇತುವೆ ನಿರ್ಮಾಣ ಮಾಡುವಂತೆ ಈ ಹಿಂದೆಯೇ ಮನವಿ ಸಲ್ಲಿಸಲಾಗಿದ್ದು, ಈ ಬಗ್ಗೆ ಎನ್‌ಎಚ್‌ಎಐ ಅಧಿಕಾರಿಗಳು ಸಹ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಎರಡು ಕಡೆ ಫ್ಲೈ ಓವರ್ ಅತ್ಯಗತ್ಯವಾಗಿದೆ ಎಂದರು.

ಕೆಂಪೇಗೌಡ ಪ್ರತಿಮೆ ವೃತ್ತದಲ್ಲಿ ಹೆದ್ದಾರಿಯಿಂದ ಪಟ್ಟಣದ ಕಡೆಗೆ, ಪಟ್ಟಣದ ಕಡೆಯಿಂದ ಹೆದ್ದಾರಿಗೆ ಹೋಗಲು ಸರಿಯಾದ ರಕ್ಷಣೆ ಇಲ್ಲ. ಜೀವ ಕೈಯಲ್ಲಿ ಹಿಡಿದು ಹೆದ್ದಾರಿ ದಾಟಬೇಕಾಗಿದೆ. ಈ ವೃತ್ತದಲ್ಲಿಯೂ ಸಹ ರಸ್ತೆ ಅಪಘಾತ ತಪ್ಪಿಸಲು ಸೇತುವೆ ನಿರ್ಮಿಸುವಂತೆ ಎನ್‌ಎಚ್‌ಎಐ ಯೋಜನಾ ನಿರ್ದೇಶಕರಿಗೆ ಸಮಸ್ಯೆ ವಿವರಿಸಲಾಗಿದೆ ಎಂದರು.

ದೋಣಿಗಾಲ್‌ನಲ್ಲಿ ಹಾಲಿ ರಸ್ತೆ ಸಂಪೂರ್ಣ ಗುಂಡಿಬಿದ್ದು ವಾಹನಗಳ ಸಂಚಾರಕ್ಕೆ ಭಾರೀ ಸಮಸ್ಯೆ ಆಗುತ್ತಿದ್ದು, ಕೂಡಲೇ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಬೇಕು ಎಂದು ಅಧಿಕಾರಿಗಳಿಗೆ ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜನಾ ನಿರ್ದೇಶಕ ಸೈಯದ್ ಅಮಾನುಲ್ಲಾ, ಡಿವೈಎಸ್‌ಪಿ ಮಾಲತೇಶ್, ಎಆರ್‌ಟಿಓ ಸರಸ್ವತಿ, ಪೊಲೀಸ್ ಇನ್ಸ್‌ಪೆಕ್ಟರ್ ವನರಾಜು ಇದ್ದರು.

## ಪ್ರತ್ಯೇಕ ಅಪಘಾತಗಳಲ್ಲಿ ನಾಲ್ವರ ದುರ್ಮರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಮೇಲಿಂದ ಬಿದ್ದ ಸವಾರ ಮೃತಪಟ್ಟಿರುವ ಘಟನೆ ಹೊಳೆನರಸೀಪುರ ತಾಲ್ಲೂಕು ಪಡುವಲಹಿಪ್ಪೆ ರಸ್ತೆಯಲ್ಲಿ ನಡೆದಿದೆ. ಕೆ.ಬ್ಯಾಡರಹಳ್ಳಿ ಗ್ರಾಮದ ಚಂದ್ರಶೇಖರ್ ಮೃತರು. ಹೊಳೆನರಸೀಪುರದ ಶಾಮಿಯಾನ ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಅವರು ಡಿ. 25ರಂದು ಪಡುವಲಹಿಪ್ಪೆ ಗ್ರಾಮಕ್ಕೆ ಶಾಮಿಯಾನ ಹಾಕಲು ಹೋಗುತ್ತಿದ್ದಾಗ ರಸ್ತೆಗೆ ಹಸು ಅಡ್ಡ ಬಂದಿದ್ದರಿಂದ ಡಿಕ್ಕಿಯಾಗುವುದನ್ನು ತಪ್ಪಿಸಲು ಜೋರಾಗಿ ಬ್ರೇಕ್ ಹಾಕಿದ ಪರಿಣಾಮ ಕೆಳಗೆ ಬಿದ್ದಿದ್ದಾರೆ. ಗಂಭೀರ ಗಾಯಗೊಂಡಿದ್ದ ಅವರನ್ನು ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಭಾನುವಾರ ಮೃತಪಟ್ಟಿದ್ದಾರೆ. ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ನಿಯಂತ್ರಣ ತಪ್ಪಿ ಬೈಕ್ ಸವಾರ ಮೃತಪಟ್ಟು ಮತ್ತೊಬ್ಬರು ಗಾಯಗೊಂಡಿರುವ ಘಟನೆ ಬೇಲೂರು ತಾಲ್ಲೂಕಿನ ಇಬ್ಬೀಡು ಗಡಿ ಸಮೀಪ ನಡೆದಿದೆ.

ಚಿಕ್ಕಮಗಳೂರು ಜಿಲ್ಲೆ ಕುರುವಂಗಿ ಗ್ರಾಮದ ರಮೇಶ್ ಮೃತರು. ಸಂಬಂಧಿಕ ರವಿ ಗಾಯಾಳು. ಸಂಬಂಧಿಕರ ಆರಾಧನೆ ಹಿನ್ನಲೆಯಲ್ಲಿ ಹಾಸನ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮಕ್ಕೆ ಬಂದಿದ್ದ ಅವರು ವಾಪಾಸ್ ಹೋಗುವಾಗ ಅಪಘಾತ ಸಂಭವಿಸಿದೆ. ಅತೀವೇಗ ಹಾಗು ನಿರ್ಲಕ್ಷ್ಯದ ಚಾಲನೆಯಿಂದ ಹಂಪ್ಸ್ ಅನ್ನು ನೆಗೆಸಿದ ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ತಲೆ ಹಾಗೂ ಎದೆ ಭಾಗಕ್ಕೆ ಗಂಭೀರ ಗಾಯಗೊಂಡಿದ್ದ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಅಪಘಾತದಲ್ಲಿ ಇಬ್ಬರು ಯುವಕರು ಸಾವು

ಚನ್ನರಾಯಪಟ್ಟಣ: ತಾಲೂಕಿನ ಎ.ಚೋಳೇನಹಳ್ಳಿ ಗ್ರಾಮದ ಬಳಿ ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ದಡಹಳ್ಳಿ ಗ್ರಾಮದ ಸುನಿಲ್ (21) ಶೃಂಗಾರ್ (19) ಮೃತರು. ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಅಜಾಗರೂಕತೆಯಿಂದ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಸುನಿಲ್ ಹಾಗೂ ಶೃಂಗಾರ್ ಇಬ್ಬರು ಸ್ನೇಹಿತರಾಗಿದ್ದು ಚನ್ನರಾಯಪಟ್ಟಣಕ್ಕೆ ಆಗಮಿಸಿ ಕೆಲಸ ಮುಗಿಸಿಕೊಂಡು ಸ್ವಗ್ರಾಮಕ್ಕೆ ತೆರಳುವಾಗ ಮೈಸೂರು ಕಡೆಯಿಂದ ಚನ್ನರಾಯಪಟ್ಟಣದ ಕಡೆಗೆ ಅತಿ ವೇಗವಾಗಿ ಬಂದ ಬಸ್ ಬೈಕ್‌ಗೆ ಡಿಕ್ಕಿಯಾಗಿ ಅನಾಹುತ ಸಂಭವಿಸಿದೆ. ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

## ದರೋಡೆಗೆ ಯತ್ನ: ಐವರ ಬಂಧನ

ಹಾಸನ: ಸಾರ್ವಜನಿಕರನ್ನು ಅಡ್ಡ ಹಾಕಿ ಹಣ ಮತ್ತಿತರ ಬೆಲೆ ಬಾಳುವ ವಸ್ತುಗಳ ದರೋಡೆ ಮಾಡಲು ಹೊಂಚು ಹಾಕಿ ಕುಳಿತಿದ್ದ ಐವರನ್ನು ನಗರ ಠಾಣೆ ಪೊಲೀಸರು ಚನ್ನಪಟ್ಟಣ ಬಡಾವಣೆಯ ದೊಡ್ಡ ಚರಂಡಿ ಬಳಿ ಬಂಧಿಸಿರುವ ಘಟನೆ ನಡೆದಿದೆ. ಖಚಿತ ಮಾಹಿತಿ ಮೇರೆಗೆ ನಗರ ಠಾಣೆ ಪಿಎಸ್‌ಐ ಪ್ರಿಯಾಂಕ ಹಾಗು ಸಿಬ್ಬಂದಿ ದಾಳಿ ನಡೆಸಿದಾಗ ಕೃತ್ಯ ಬಯಲಾಗಿದೆ. ದೊಡ್ಡ ಚರಂಡಿ ಹತ್ತಿರ ಮರಗಿಡಗಳ ಮರೆಯಲ್ಲಿ ಆಟೋ ರಿಕ್ಷಾ ನಿಲ್ಲಿಸಿಕೊಂಡಿದ್ದ ಕಿಡಿಗೇಡಿಗಳು ಕಬ್ಬಿಣದ ರಾಡ್, ದೊಣ್ಣೆ ಸಮೇತ ದಾರಿಯಲ್ಲಿ ಒಬ್ಬಂಟಿಯಾಗಿ ಹೋಗುವ ಜನರಿಗೆ ಹೆದರಿಸಲು ಪ್ರಯತ್ನಿಸುತ್ತಿದ್ದರು. ಅವರ ಚಲನವಲನ ಗಮನಿಸಿದ ಪೊಲೀಸರು ದಾಳಿ ನಡೆಸಿ ಶಸ್ತ್ರಾಸ್ತ್ರಗಳೊಂದಿಗೆ ವಶಕ್ಕೆ ಪಡೆದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಿಲ್ಲಾ ಪತ್ರಕರ್ತರ ಸಂಘದಿಂದ ಕ್ಯಾಲೆಂಡರ್ ಬಿಡುಗಡೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಜಿಲ್ಲಾ ಪತ್ರಕರ್ತರ ಸಂಘದ ಡಿ.ವಿ.ಜಿ. ಸಭಾಂಗಣದಲ್ಲಿ ಸೋಮವಾರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ ಹಾಗೂ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, 2025ಕ್ಕೆ ವಿದಾಯ ಹೇಳಿ ಹೊಸ ವರ್ಷವನ್ನು ಸ್ವಾಗತಿಸಲು ಎಲ್ಲರೂ ಸಜ್ಜಾಗಿದ್ದೇವೆ. ವರ್ಷದ ಕಹಿ ಘಟನೆಗಳನ್ನು ಮರೆತು ಸಿಹಿ ನೆನಪುಗಳೊಂದಿಗೆ ಭವಿಷ್ಯ ಕಟ್ಟಿಕೊಳ್ಳಲು ಪ್ರಯತ್ನಿಸೋಣ. ಹೊಸ ಜೀವನ ಆರಂಭಿಸೋಣ ಎಂದರು.

ನಾನು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ಡಿ. 19ಕ್ಕೆ 6 ತಿಂಗಳು ಕಳೆದವು. ಆರಂಭದಲ್ಲಿ ಪತ್ರಕರ್ತರು ನೀಡಿದ ಸ್ವಾಗತ ಅವಿಸ್ಮರಣೀಯ. ಹಾಸನಾಂಬ ಉತ್ಸವ ಹೊಸ ದಾಖಲೆ ಸೃಷ್ಟಿಸಿ ಚೆನ್ನಾಗಿ ನಡೆಯಿತು. ಜಿಲ್ಲೆಗೆ 2 ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ನೀಡಿದ್ದಾರೆಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತನಾಡಿ, ಜಿಲ್ಲಾಧಿಕಾರಿ ಅವರು ಉತ್ತಮ ಕೆಲಸ ಮಾಡುತ್ತಿದ್ದು, ನಿಮ್ಮ ಮಾದರಿ ಸೇವೆಯೂ ಎಂದೆಂದಿಗೂ ನೆನಪಿನಲ್ಲಿ ಇರಲಿದೆ. ಇನ್ನೂ ಒಳ್ಳೆಯ ಕೆಲಸ ಮಾಡಿ, ನಿಮಗೆ ನಮ್ಮೆಲ್ಲರ ಬೆಂಬಲ ಸದಾ ಇರಲಿದೆ ಎಂದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಮಾತನಾಡಿ, ಮುಂದಿನ ದಿನಗಳಲ್ಲಿ ಜಿಲ್ಲಾ ಹಾಗು ತಾಲ್ಲೂಕು ಘಟಕಗಳನ್ನು ಸದೃಢಗೊಳಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಸಂಘದಲ್ಲಿ ಎಲ್ಲರಿಗೂ ಒಂದೊಂದು ಜವಾಬ್ದಾರಿ ನೀಡಲಾಗಿದ್ದು, ಅವರವರ ಕೆಲಸ-ಕಾರ್ಯಗಳನ್ನು ಅವರು ಮಾಡುತ್ತಿದ್ದಾರೆ ಎಂದರು.

ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆಪಿಎಸ್ ಪ್ರಮೋದ್, ಉಪಾಧ್ಯಕ್ಷ ಎನ್.ನಂಜುಂಡೇಗೌಡ ಮಾತನಾಡಿದರು.

ಸಂಘದ ಮಾಜಿ ಅಧ್ಯಕ್ಷ ಬಾಳ್ಳುಗೋಪಾಲ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಉಪಾಧ್ಯಕ್ಷ ಜಿ.ಪ್ರಕಾಶ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ. ಹರೀಶ್, ಕುಶ್ವಂತ್, ಖಜಾಂಚಿ ಪ್ರಕಾಶ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿದ್ದರು. ಚನ್ನರಾಪಟ್ಟಣದ ಪತ್ರಕರ್ತ ನಾಗೇಶ್ ಪ್ರಾರ್ಥಿಸಿದರು. ಪುಷ್ಪಾ ಜಯರಾಂ ನಿರೂಪಣೆ ಮಾಡಿದರು. ಕಾರ್ಯದರ್ಶಿ ಹರೀಶ್ ಕೆ.ಎಂ. ಸ್ವಾಗತಿಸಿದರು.

## ಹಾಸನ ತಾಲೂಕಿನ ರಾಜಕೀಯ ಗಾಳಿ ಯಾವ ಕಡೆ ಬೀಸ್ತಿದೆ ಅಂತ ಗೊತ್ತಾಗುತ್ತಿದೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ನಿಟ್ಟೂರು ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಜಯ ಸಾಧಿಸುವ ಮೂಲಕ ಸಂಘ ಸಂಪೂರ್ಣವಾಗಿ ಬಿಜೆಪಿ ತೆಕ್ಕೆಗೆ ಬಂದಿದೆ. ಒಟ್ಟು 11 ಸ್ಥಾನಗಳಲ್ಲಿ 10 ಸ್ಥಾನಗಳನ್ನು ಬಿಜೆಪಿ ಬೆಂಬಲಿತರು ಗೆದ್ದುಕೊಂಡಿದ್ದಾರೆ.

ನೂತನವಾಗಿ ಆಯ್ಕೆಯಾದ ನಿರ್ದೇಶಕರನ್ನು ಸನ್ಮಾನಿಸಿ ಮಾತನಾಡಿದ ಮಾಜಿ ಶಾಸಕ ಪ್ರೀತಂ ಗೌಡ, ಈ ಫಲಿತಾಂಶ ರಾಜಕೀಯವಾಗಿ ಗಾಳಿ ಯಾವ ಕಡೆ ಬೀಸುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ಹಾಸನ ವಿಧಾನಸಭಾ ಕ್ಷೇತ್ರದ ರಾಜಕೀಯ ಶಕ್ತಿ ನೋಡಬೇಕೆಂದರೆ ನಿಟ್ಟೂರು ಪಂಚಾಯ್ತಿಯಲ್ಲಿ ಯಾರು ಮೇಲುಗೈ ಸಾಧಿಸುತ್ತಾರೋ, ಅವರೇ ಇಡೀ ಕ್ಷೇತ್ರದ ದಿಕ್ಕು ನಿರ್ಧರಿಸುತ್ತಾರೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಗ್ರಾಮ, ತಾಲ್ಲೂಕು, ಹಾಗು ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿ ಪಕ್ಷವನ್ನು ಬೇರು ಮಟ್ಟದಿಂದ ಮತ್ತಷ್ಟು ಗಟ್ಟಿ ಮಾಡುವ ಅಗತ್ಯವಿದೆ ಎಂದು ಕರೆ ನೀಡಿದರು.

ಹಾಸನ ಜಿಲ್ಲೆಯ ಏಳಕ್ಕೂ ಏಳು ಕ್ಷೇತ್ರಗಳನ್ನು ಬಿಜೆಪಿ ಗೆಲ್ಲಬೇಕು. ಈ ಮೂಲಕ ರಾಜ್ಯದಲ್ಲಿ 140 ಸ್ಥಾನಗಳನ್ನು ಗೆದ್ದು ಬಿಜೆಪಿ ಸ್ವಂತ ಶಕ್ತಿಯಲ್ಲಿ ಅಧಿಕಾರಕ್ಕೆ ಬರಬೇಕು. ಇದಕ್ಕೆ ರಾಜ್ಯಾಧ್ಯಕ್ಷರು ಹಾಗೂ ಪಕ್ಷದ ಹಿರಿಯರ ಅಪೇಕ್ಷೆಯೂ ಇದೆ ಎಂದು ಹೇಳಿದರು.

ಮುಂದಿನ ಎರಡು ವರ್ಷಗಳ ಕಾಲ ಈ ಗುರಿ ಸಾಧನೆಗಾಗಿ ಸಂಘಟಿತವಾಗಿ ಕೆಲಸ ಮಾಡೋಣ ಎಂದು ಕಾರ್ಯಕರ್ತರು ಹಾಗೂ ನೂತನ ನಿರ್ದೇಶಕರಿಗೆ ಪ್ರೀತಂ ಗೌಡ ಕರೆ ನೀಡಿದರು.

# ಕೆಯುಡಬ್ಲ್ಯೂಜೆ ತಾಲ್ಲೂಕು ಪತ್ರಕರ್ತರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧೀನದ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘಗಳಿಗೆ ಭಾನುವಾರ ಚುನಾವಣೆ ನಡೆಯಿತು.

2025-28ರ ಅವಧಿಯ ಚುನಾವಣೆ ಇದಾಗಿದ್ದು ಕೆಲವು ತಾಲ್ಲೂಕುಗಳಲ್ಲಿ ಕೆಲ ಸ್ಥಾನಗಳಿಗೆ ಚುನಾವಣೆ ನಡೆದರೆ ಬಹುತೇಕ ಕಡೆ ಅವಿರೋಧ ಆಯ್ಕೆ ನಡೆದಿದೆ. ಚನ್ನರಾಯಪಟ್ಟಣ ತಾಲ್ಲೂಕು ಸಂಘದ ಅಧ್ಯಕ್ಷರಾಗಿ ದಯಾನಂದ್ ಶೆಟ್ಟಿಹಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ಆರ್. ಶ್ರೀನಿವಾಸ್ ಉಳ್ಳಾವಳ್ಳಿ ಚುನಾಯಿತರಾದರೆ ಖಜಾಂಚಿ, ಉಪಾಧ್ಯಕ್ಷ ಸ್ಥಾನ 2, ಸಹ ಕಾರ್ಯದರ್ಶಿ 2 ಸ್ಥಾನ ಹಾಗು 4 ನಿರ್ದೇಶಕ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು.


ಉಪಾಧ್ಯಕ್ಷರಾಗಿ ನಂದನ್ ಪುಟ್ಟಣ್ಣ, ಕೆ.ಪಿ.ಪುಟ್ಟರಾಜು, ಸಹ ಕಾರ್ಯದರ್ಶಿಯಾಗಿ ಜೈ ಕುಮಾರ್, ನಾಗೇಂದ್ರ ರಾಯ, ಖಜಾಂಚಿಯಾಗಿ ಎ.ಎಲ್. ನಾಗೇಶ್, ನಿರ್ದೇಶಕರಾಗಿ ಎ.ಎಂ.ಜಯರಾಮ್, ಎ. ನಟೇಶ್, ಪಾಂಡುರಂಗ ಮತ್ತು ವೆಂಕಟಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಗಳಾಗಿ ಹಿರೀಸಾವೆ ಪ್ರತಾಪ್ ಮತ್ತು ಕೃಷ್ಣ ಇಬ್ಬೀಡು ಕರ್ತವ್ಯ ನಿರ್ವಹಿಸಿದರು.

### ಅರಸೀಕೆರೆಗೆ ಆನಂದ್ ಅಧ್ಯಕ್ಷ

ಅರಸೀಕೆರೆ ತಾಲ್ಲೂಕು ಸಂಘದ ಅಧ್ಯಕ್ಷರಾಗಿ ಟಿ.ಆನಂದ್, ಉಪಾಧ್ಯಕ್ಷರಾಗಿ ಮಾಡಾಳು ಸೊಮಶೇಖರ್, ಹೇಮಂತ್ ಕುಮಾರ್ ಹಾಗು ಪ್ರಧಾನ ಕಾರ್ಯದರ್ಶಿಯಾಗಿ ಎಸ್. ವಿ.ನವೀನ್ ಕುಮಾರ್ ಚುನಾಯಿತರಾಗಿದ್ದಾರೆ. ಕಾರ್ಯದರ್ಶಿ ಸ್ಥಾನಕ್ಕೆ ಪುಟ್ಟಪ್ಪ ಶಶಿವಾಳು, ಟಿ.ಎ.ಸ್ವಾಮಿ, ಖಜಾಂಚಿಯಾಗಿ ಎಂ.ಎಸ್. ನಂದೀಶ್ ಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಟಿ.ಎಂ.ಜಗದೀಶ್, ಜೆ.ಎನ್. ರಂಗನಾಥ್, ಜೆ.ಎಸ್.ರವಿಶಂಕರ್, ವಿ.ಸತೀಶ್, ಸೈಯದ್ ಸಾದಿಕ್, ಕೆ.ಪಿ.ವೀರಭದ್ರಚಾರ್, ಬಿ.ಎಂ.ಸತೀಶ್, ಎಸ್. ವಿಜಯಕುಮಾರ್ ಅವಿರೋಧ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಜಿಲ್ಲಾ ಸಂಘದ ಉಪಾಧ್ಯಕ್ಷ ಎನ್.ನಂಜುಂಡೇಗೌಡ ಹಾಗು ಸಹಾಯಕ ಚುನಾವಣಾಧಿಕಾರಿಯಾಗಿ ಎಂ.ಜಿ.ಸ್ವರೂಪ್ ಕಾರ್ಯ ನಿರ್ವಹಿಸಿದರು.

### ಲಾಟರಿಯಲ್ಲಿ ಗೆದ್ದ ಶಿವಕುಮಾರ್

ಅರಕಲಗೂಡು ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಪಿ.ಶಿವಕುಮಾರ್ ಆಯ್ಕೆಯಾದರು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಟಿ.ವಿಜಯಕುಮಾರ್ ಮತ್ತು ಪಿ. ಶಿವಕುಮಾರ್ ಅವರಿಗೆ ಸಮ



ಪ್ರಮಾಣದಲ್ಲಿ ಮತಗಳು ಚಲಾವಣೆಯಾದ ಹಿನ್ನಲೆಯಲ್ಲಿ ಲಾಟರಿ ಮೂಲಕ ಶಿವಕುಮಾರ್ ಆಯ್ಕೆಯಾದರು.

ಉಪಾಧ್ಯಕ್ಷರಾಗಿ ದೇವಕಿ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿಯಾಗಿ ಗಣೇಶ್ ಶೆಟ್ಟಿ, ಕಾರ್ಯದರ್ಶಿ ಕೆ.ವಿ.ಸತೀಶ್, ಖಜಾಂಚಿಯಾಗಿ ರವಿ ಬೆಟ್ಟಸೊಗೆ ಹಾಗೂ ನಿರ್ದೇಶಕರಾಗಿ ಸಂತೋಷಗೌಡ, ಡಿ.ಎನ್. ರಾಜೇಂದ್ರ ಕುಮಾರ್, ಎಂ.ಬಿ. ಸಾಹಸ್, ಬಿ.ಎ.ರಘು, ಕೆ.ಆರ್. ಶ್ರೀನಿವಾಸ್, ಬಿ.ಸಿ.ಜಯಕುಮಾರ್ ಅವಿರೋಧ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಖುಶ್ವಂತ್, ಸಹಾಯಕ ಚುನಾವಣಾಧಿಕಾರಿಯಾಗಿ ಹೆಚ್.ಎಸ್. ಶರತ್ ಕಾರ್ಯನಿರ್ವಹಿಸಿದರು.

ಸಕಲೇಶಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ 2025-28ನೇ ಸಾಲಿಗೆ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಕಾಂತರಾಜ್ ಹೊನ್ನೆಕೋಡಿ, ಉಪಾಧ್ಯಕ್ಷರಾಗಿ ಎಸ್.ಎಲ್.ಸುಧೀರ್, ನವೀನ್ ಸದಾ, ಪ್ರಧಾನ ಕಾರ್ಯದರ್ಶಿಯಾಗಿ ಅಕ್ಬರ್ ಜುನೈದ್, ಕಾರ್ಯದರ್ಶಿಗಳಾಗಿ ಪ್ರವೀಣ್ ಹಾಗೂ ನವೀನ್, ಖಜಾಂಚಿಯಾಗಿ ಯೋಗೇಶ್ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹೆತ್ತೂರು ರವಿ, ಜಗದೀಶ್ ಹೊರಟ್ಟಿ, ವಿನಯ್ ವನಗೂರು, ನಿರಂಜನ್ ಮೂರ್ತಿ, ಚೇತನ್ ಹರಗರಹಳ್ಳಿ, ಶಿವಕುಮಾರ್, ಅರ್ಜುನ್ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ನವೀನ್ ಕರ್ತವ್ಯ ನಿಭಾಯಿಸಿದರು.

ಆಲೂರು ತಾಲ್ಲೂಕು ಪತ್ರಕರ್ತರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಆದಿಲ್ ಪಾಷ ಸೇರಿ ಎಲ್ಲಾ ಹುದ್ದೆಗಳಿಗೆ ಅವಿರೋಧ ಆಯ್ಕೆ ನಡೆದಿದೆ. ಉಪಾಧ್ಯಕ್ಷರಾಗಿ ಬಿ.ಎನ್. ನವೀನ್‌ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ರುದ್ರಕುಮಾರ್, ಕಾರ್ಯದರ್ಶಿ ಸತೀಶ್ ಚಿಕ್ಕಕಣಗಾಲು, ಖಜಾಂಚಿ ಹೆಚ್.ವಿ. ಚೇತನ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಬೀರ್ ಅಹಮದ್, ಹೆಚ್.ವೈ.ವಿಶ್ವನಾಥ್, ಎಂ.ಪಿ.ಚಿದಾನಂದ, ಪ್ರದೀಪ, ವೀರಭದ್ರಸ್ವಾಮಿ, ಸಲೀಂ ಪಾಷ, ಹೆಚ್.ಡಿ.ಪ್ರದೀಪ್‌ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ಜಿ. ಪ್ರಕಾಶ್ ಮತ್ತು ಚಲಂ ಹಾಡ್ಲಹಳ್ಳಿ ಘೋಷಿಸಿದರು.

ಹೊಳೆನರಸೀಪುರ ಸಂಘದ ಅಧ್ಯಕ್ಷರಾಗಿ ಹೆಚ್.ಬಿ.ವೆಂಕಟೇಶ್, ಉಪಾಧ್ಯಕ್ಷರಾಗಿ ಡಿ.ಕೆ. ವಸಂತಯ್ಯ, ಪ್ರಧಾನ ಕಾರ್ಯದರ್ಶಿಯಾಗಿ



ರಾಮಕೃಷ್ಣ ಚುನಾಯಿತರಾದರೆ ಖಜಾಂಚಿಯಾಗಿ ಎಲ್. ಚಂದ್ರಶೇಖರ್, ಕಾರ್ಯದರ್ಶಿಯಾಗಿ ಹೆಚ್.ಡಿ.ಅಭಿಲಾಷ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಭಾನುಮತಿ, ಕೆ.ಎಸ್.ಚಂದ್ರು, ಧನಂಜಯ್, ಎಸ್.ವಿಶ್ವನಾಥ್ ಮತ್ತು ಹೆಚ್.ಟಿ.ಸುದರ್ಶನ್ ಅವಿರೋಧ ಆಯ್ಕೆಯಾದರು. ಕೆ.ಎಂ.ಹರೀಶ್ ಮತ್ತು ಹೆಚ್ .ಎ.ನಾಗರಾಜ್ ಚುನಾವಣಾ ಜವಾಬ್ದಾರಿ ನಿರ್ವಹಿಸಿದರು.

ಬೇಲೂರು ಸಂಘದ ಅಧ್ಯಕ್ಷರಾಗಿ ಬಿ.ಬಿ.ಶಿವರಾಜು, ಉಪಾಧ್ಯಕ್ಷರಾಗಿ ಎಂ.ಸಿ.ಕುಮಾರ್ ಮತ್ತು ಆರ್.ವೆಂಕಟೇಶ್ ಅವಿರೋಧ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಚುನಾವಣೆ ನಡೆದಿದ್ದು ಬಿ.ಎಲ್.ಲಕ್ಷ್ಮಣ್, ಖಜಾಂಚಿಯಾಗಿ ಬಿ.ಆರ್.ಲೋಹಿತ್ ಚುನಾಯಿತರಾದರು. ಕಾರ್ಯದರ್ಶಿಯಾಗಿ ಬಿ.ಎನ್.ಗಣೇಶ್ ಮತ್ತು ದಿನೇಶ್ ಬೆಳ್ಳಾವರ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಇಬ್ಬೀಡು ರಮೇಶ್, ರವಿ ಹೊಳ್ಳ, ಬಿ.ಎಸ್. ಆರಾಧ್ಯ, ಬಿ.ಎಂ.ಜಗದೀಶ್, ವಿಜಯಕುಮಾರ್, ಚಂದ್ರಶೇಖರ್ ಮತ್ತು ತೇಜಸ್ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಗಳಾಗಿ ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಹಾಗೂ ಜಿ.ಶರಣ್ ಕಾರ್ಯನಿರ್ವಹಿಸಿದರು.

# ಹಾಸನದಲ್ಲಿ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಗಮನಾರ್ಹ ಪಾತ್ರ ವಹಿಸಿದ ಕಾಂಗ್ರೆಸ್ 140 ವರ್ಷಗಳನ್ನು ಪೂರೈಸಿದೆ ಮಾತ್ರವಲ್ಲದೆ ರಾಷ್ಟ್ರ ಅಭಿವೃದ್ಧಿಗೆ ತನ್ನದೇಯಾದ ಕೊಡುಗೆ ನೀಡಿದೆಯೆಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಈ.ಹೆಚ್. ಲಕ್ಷ್ಮಣ್ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಏರ್ಪಡಿಸಿದ್ದ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆಯಲ್ಲಿ ಮಹನೀಯರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, 1885ರ ಡಿ. 28ರಂದು ಕಾಂಗ್ರೆಸ್ ಅಧಿಕೃತವಾಗಿ ಚಾಲನೆ ಪಡೆಯಿತು. ಪಕ್ಷ ಸಂಘಟನೆಯಲ್ಲಿ ಅನೇಕರು ಶ್ರಮಿಸಿದ್ದಾರೆ. ಸುದೀರ್ಘ ಇತಿಹಾಸ ಹೊಂದಿರುವ ಪಕ್ಷವು ಭಾರತದ ಅಭಿವೃದ್ಧಿಯಲ್ಲಿ ಗಮನಾರ್ಹ ಪಾತ್ರ ನಿಭಾಯಿಸಿದೆ ಎಂದರು.

ಜಿಲ್ಲಾ ರೆಡ್ ಕ್ರಾಸ್ ಸಭಾಪತಿ ಹೆಚ್.ಪಿ.ಮೋಹನ್ ಮಾತನಾಡಿ, ಬ್ರಿಟಿಷರು ಮತ್ತು ಭಾರತೀಯ ಬುದ್ಧಿವಂತ ಯುವಕರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲು ಆರಂಭವಾದದ್ದೇ ಕಾಂಗ್ರೆಸ್. ಅದರಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಇದ್ದರು. ದೇಶದಲ್ಲಿ ಉತ್ತಮ ವಾತಾವರಣ ಕಲ್ಪಿಸಲು ಚಿಂತಕರ ವೇದಿಕೆಯನ್ನು ಕಾಂಗ್ರೆಸ್ ನಿರ್ಮಿಸಿತು



ಎಂದರು. 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಮಹಾತ್ಮ ಗಾಂಧೀಜಿ ಚಂಪಾರಣ್ಯ, ಕೇರಳ ಸತ್ಯಾಗ್ರಹ ಮಾಡಿದ ಮೇಲೆ ಸಾಕಷ್ಟು ಜನರು ಕಾಂಗ್ರೆಸ್ ತತ್ವ ಸಿದ್ಧಾಂತಗಳನ್ನು ಒಪ್ಪಿ ಸದಸ್ಯತ್ವ ಪಡೆದರು. ಆದರೆ, ಗಾಂಧೀಜಿಯವರ ಅಹಿಂಸಾ ಚಳವಳಿಗೆ ಬಾಲಗಂಗಾಧರನಾಥ ತಿಲಕ ಸೇರಿ ಅನೇಕರು ವಿರೋಧಿಸಿದರು. ಸಾಕಷ್ಟು ಪ್ರತಿರೋಧ ಬಂದರೂ ಗಾಂಧೀಜಿ ಅವರು ಅಹಿಂಸೆ, ಶಾಂತಿ ಮೂಲಕವೇ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಇಂತಹ ಮಹಾನ್ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷದ ಸದಸ್ಯರಾಗಿರುವುದು ನಮ್ಮೆಲ್ಲರ ಪುಣ್ಯ ಎಂದರು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು ದಾಸರಕೊಪ್ಪಲು, ಕಾರ್ಮಿಕ ವಿಭಾಗ ಅಧ್ಯಕ್ಷ ಹೇಮಂತ್, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಕಾರ್ಯದರ್ಶಿ ರವಿ ಕಿರಣ್, ಖಯೂಂ, ಹೇಮಂತ್ ಇದ್ದರು.

# ಹೊಸಳಿಗಮ್ಮ ಶಕ್ತಿ ದೇವತೆಗೆ ಈಡುಗಾಯಿ ಒಡೆದ ಭಕ್ತರು

ಕನ್ನಡ ಪೋಸ್ಟ್ ನ್ಯೂಸ್

ಅರಕಲಗೂಡು: ತಾಲೂಕಿನ ರಾಮನಾಥಪುರ ಪ್ರಸನ್ನ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಸನ್ನಿಧಿಯಲ್ಲಿರುವ ಶ್ರೀ ಹೊಸಳಿಗಮ್ಮ ಶಕ್ತಿ ದೇವತೆಗೆ ಭಕ್ತರು ಸಾವಿರಾರು ಈಡುಗಾಯಿ ಒಡೆದು ಭಕ್ತಿ ಮೆರೆದರು.

ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥೋತ್ಸವ ಸುಸೂತ್ರವಾಗಿ ಸಾಗಿದ ಹಿನ್ನಲೆಯಲ್ಲಿ ಶನಿವಾರ ರಾತ್ರಿ ದೇವಸ್ಥಾನದವರು ಹಾಗೂ ಭಕ್ತರು ಸೇರಿ ಸಾವಿರಾರು ಈಡುಗಾಯಿ ಹಾಕಿದರು. ಸುಕ್ಷೇತ್ರದಲ್ಲಿ ಕಳೆದ ತಿಂಗಳು ನ. 26 ರಂದು ಹಾಗು ಡಿ. 26 ರಂದು ಶ್ರೀ ಸುಬ್ರಹ್ಮಣ್ಯಸ್ವಾಮಿ ಮಹಾ ರಥೋತ್ಸವ ಹಾಗೂ ಎರಡನೇ ತುಳು ಸೃಷ್ಟಿ ಮಹಾ ರಥೋತ್ಸವ ನಂತರ ಮಾರನೇ ದಿವಸ ಮುಕ್ತಾಯದ



ಶ್ರೀ ಪ್ರಸನ್ನ ಸುಬ್ರಮಣ್ಯ ಸ್ವಾಮಿಯವರ ದೇವಾಲಯದ ಸಭಾಂಗಣದಲ್ಲಿರುವ ಶಕ್ತಿ ದೇವತೆಯಾದ ಹೊಸಳಿಗಮ್ಮನವರಿಗೆ ಈ ಹಿಂದಿನ ಎಲ್ಲಾ ಕಾರ್ಯಗಳು ಸುಸೂತ್ರವಾಗಿ ನಡೆದಿರುವುದಕ್ಕೆ ಭಕ್ತರು ಸುಮಾರು 2 ಸಾವಿರ ತೆಂಗಿನಕಾಯಿ ಹಾಕಿದರು.

ಬ್ರಹ್ಮಶ್ರೀ ತಂತ್ರಸಾರ ಆಗಮ ಕುಶಲ ಭಾರತೀರಮಣ, ಪಾರುಪತ್ತೇಗಾರ್ ರಮೇಶ್ ಭಟ್, ಅರ್ಚಕರಾದ ರಾಘವೇಂದ್ರ ಭಟ್, ಶ್ರೀನಾಥ್, ಕಾರ್ತಿಕ್ ಸೋಮಯಾಜಿ, ತ್ರಿವಿಕ್ರಮ್, ಪ್ರಹ್ಲದ್, ಸುಮಿತ, ಪ್ರಸನ್ನ, ಶ್ರೀವಿಷ್ಣು, ರಾಮಚಂದ್ರಭಟ್, ನಾಗರಾಜು ಪೂಜೆಯಲ್ಲಿ ಭಾಗವಹಿಸಿದ್ದರು. ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

# ಪ್ರತ್ಯೇಕ ಪ್ರಕರಣ: 6.40 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅರಸೀಕೆರೆ ತಾಲ್ಲೂಕಿನ ಬಾಣಾವರ ಹಾಗೂ ಸಕಲೇಶಪುರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ 6.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿದೆ.

ಸಕಲೇಶಪುರ ತಾಲ್ಲೂಕು ಕಬ್ಬಿನಗದ್ದೆ ಗ್ರಾಮದ ನೇತ್ರಾ ಎಂಬುವವರ ಮನೆಯಲ್ಲಿ ಡಿ. 27ರಂದು ಹಾಡ ಹಗಲೇ 4.95 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು ಮಾಡಲಾಗಿದೆ. ಕಾಫಿ ತೋಟಕ್ಕೆ ಹಣ್ಣು ಕುಯ್ಯಲು ಮನೆಗೆ ಬೀಗ ಹಾಕಿ ಕೀಯನ್ನು ಮನೆ ಹಿಂದಿನ ಬಾತ್ ರೂಂನಲ್ಲಿಟ್ಟು ತೆರಳಿದ್ದರು. ಮಧ್ಯಾಹ್ನ 1 ಗಂಟೆಗೆ ಊಟಕ್ಕೆಂದು ಬಾಗಿಲು ತೆರೆದು ಪ್ರವೇಶಿಸಿದಾಗ ಬೀರುವಿನ ಬಾಗಿಲು ತೆರೆದಿರುವುದು ಗೊತ್ತಾಗಿದೆ. 30 ಗ್ರಾಂ ತೂಕದ ಚಿನ್ನದ ಚೈನು, 5 ಗ್ರಾಂ ತೂಕದ ಚಿನ್ನದ ಉಂಗುರ, 5 ಗ್ರಾಂ ಚಿನ್ನದ ಮಾಟಿ, 6 ಗ್ರಾಂ ಚಿನ್ನದ ಓಲೆ, 4 ಗ್ರಾಂ ಚಿನ್ನದ ಹ್ಯಾಂಗಿಂಗ್ ಹಾಗು 31 ಗ್ರಾಂ ತೂಕದ ಚಿನ್ನದ ಬಳೆ, 12 ಗ್ರಾಂ ಚಿನ್ನದ ಚೈನು, 15 ಗ್ರಾಂ ತೂಕದ ಚಿನ್ನದ ಚೈನು, 4 ಗ್ರಾಂ ಚಿನ್ನದ ಉಂಗುರ ಹಾಗು 30 ಸಾವಿರ ರೂ.ಗಳನ್ನು ಕದ್ದಿದ್ದಾರೆ.

ಮನೆಯ ಹಿಂಬಾಗಿಲು ಹಾಕಿದ ಹಾಗೆಯೇ ಇದ್ದು ದೇವರ ಕೋಣೆಯ ಹೆಂಚು ತೆಗೆದು ಒಳನುಗ್ಗಿರುವ ಕಳ್ಳರು ಕಳ್ಳತನ ಮಾಡಿ ಅದೇ ದಾರಿಯಲ್ಲಿ ವಾಪಾಸ್ಸಾಗಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 1.45 ಲಕ್ಷ ರೂ. ಬೆಲೆಯ ಚಿನ್ನಾಭರಣ ಕದ್ದಿರುವ ಘಟನೆ ಬಾಣಾವರದ ದೇವನೂರು ರಸ್ತೆಯ ಕೆ.ಆರ್.ಶಿವಕುಮಾರ್ ಎಂಬುವವರ ಮನೆಯಲ್ಲಿ ನಡೆದಿದೆ.

ಡಿ. 25 ರಂದು ಕುಟುಂಬ ಸಮೇತ ಮಂತ್ರಾಲಯಕ್ಕೆ ತೆರಳಿದ್ದರು. ಮಾರನೇ ದಿನ ರಾತ್ರಿ ವಾಪಾಸ್ ಬಂದಾಗ ಕಾಂಪೌಂಡ್ ಗೇಟ್ ತೆರೆದಿರುವುದನ್ನು ಕಂಡು ಸಂಶಯದಿಂದ ಒಳಬಂದಾಗ ಬಾಗಿಲ ಬೀಗ ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿಟ್ಟಿದ್ದ 14 ಗ್ರಾಂ ತೂಕದ ಚಿನ್ನದ ಬಳೆ, 12 ಗ್ರಾಂ ತೂಕದ ಚಿನ್ನದ ಬ್ರಾಸ್ಲೈಟ್, 2 ಗ್ರಾಂ ತೂಕದ ಚಿನ್ನದ ಓಲೆ, 3 ಗ್ರಾಂ ತೂಕದ ಚಿನ್ನದ ಪೆಂಡೆಂಟ್ ಕಳವು ಮಾಡಿದ್ದಾರೆ. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಾಸನ ಪಿಯು ಕಾಲೇಜಿನಲ್ಲಿ ಆಹಾರ ಮೇಳ ಯಶಸ್ವಿ



ಅರಕಲಗೂಡು: ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಜ್ಞಾನ ಬೆಳೆಸುವುದು ಅತ್ಯವಶ್ಯಕವೆಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಬಿ.ಕೆ. ಗಂಗಾಧರ್ ಹೇಳಿದರು.

ಪಟ್ಟಣದ ಟೈಮ್ಸ್ ಹಾಸನ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ಆಹಾರ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ಆಧುನಿಕ ಪ್ರಪಂಚದಲ್ಲಿ ವ್ಯಾವಹಾರಿಕ ಜ್ಞಾನ ಮುಖ್ಯವಾಗಿದೆ. ವಿದ್ಯಾರ್ಥಿ ದಿಸೆಯಲ್ಲೇ ಕಲಿಯಲು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ವ್ಯವಹಾರಿಕ ಕೌಶಲ ಬೆಳೆಸುವ ಉದ್ದೇಶದಿಂದ ಆಹಾರ ಮೇಳ ಹಮ್ಮಿಕೊಂಡಿದ್ದು ವಿದ್ಯಾರ್ಥಿಗಳು ಅದರ ಉಪಯೋಗ ಪಡೆದು ತಮ್ಮ ಕೌಶಲ ಪ್ರದರ್ಶಿಸುವಂತೆ ತಿಳಿಸಿದರು. ಪ್ರಾಂಶುಪಾಲ ಪಿ. ನವೀನ್ ಉಲಿವಾಲ ಅಧ್ಯಕ್ಷತೆ ವಹಿಸಿದ್ದರು. 14 ಮಳಿಗೆಗಳನ್ನು ತೆರೆದಿದ್ದ ವಿದ್ಯಾರ್ಥಿಗಳ ತಂಡ ತಾವೇ ತಯಾರಿಸಿ ತಂದ ಹೈದರಾಬಾದ್ ಬಿರಿಯಾನಿ, ಶಾವಿಗೆ, ಕಡುಬು, ಕೋಳಿ ಸಾರು, ನಿಪ್ಪಟ್ಟು, ಸಿಹಿ ತಿನಿಸು, ಪಾನಿಪೂರಿ, ಬರ್ಗರ್, ಪಾವ್ ಬಾಜಿ, ಬಜ್ಜಿ, ಐಸ್ ಕ್ರೀಂ, ಕಬಾಬ್, ಫಿಶ್ ಫ್ರೈ, ಪರೋಟ, ಜಾಮೂನು ಸೇರಿ ಹತ್ತು ಹಲವು ಸಸ್ಯಾಹಾರಿ ಮತ್ತು ಮಾಂಸಾಹಾರಿ ಖಾದ್ಯ ಹಾಗು ಚಾಟ್ಸ್‌ಗಳನ್ನು ಮಾರಾಟ ಮಾಡಿದರು.

ಪೋಷಕರು, ಸಹ ವಿದ್ಯಾರ್ಥಿಗಳು ತಿಂಡಿ, ತಿನಿಸುಗಳ ಖರೀದಿ ನಡೆಸಿ ಪ್ರೋತ್ಸಾಹಿಸಿದರು. ದ್ವಿತೀಯ ಪಿಯು ವಿದ್ಯಾರ್ಥಿನಿಯರು ಸೀರೆ, ವಿದ್ಯಾರ್ಥಿಗಳು ಪಂಚೆ ಶಲ್ಯ ಧರಿಸುವ ಮೂಲಕ ಆಹಾರ ಮೇಳಕ್ಕೆ ಮೆರುಗು ನೀಡಿದರು. ಹೆಚ್ಚಿನ ವಹಿವಾಟು ನಡೆಸಿದ ಮೂರು ತಂಡಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಉಪನ್ಯಾಸಕರಾದ ಕೃಷ್ಣಮೂರ್ತಿ, ಡಿ.ಮಧು, ಪ್ರಜ್ವಲ್, ಉದಯ್ ಕುಮಾರ್, ನಂದೀಶ್, ರಾಕೇಶ್, ಅರ್ಪಿತಾ, ರಿಯಾನ, ರೇಷ್ಮಾ, ಅನುಶ್ರೀ, ಭೂಮಿಕಾ, ಚಂದ್ರಶೇಖರ್ ಇದ್ದರು.

# ಇತಿಹಾಸದಲ್ಲಿ ಈ ದಿನ

## ಡಿಸೆಂಬರ್-30

1865: ಅಮೆರಿಕಾದಲ್ಲಿ 13ನೇ ಸಂವಿಧಾನ ತಿದ್ದುಪಡಿ ಅಂಗೀಕಾರವಾಗಿ ಗುಲಾಮಗಿರಿ ಅಧಿಕೃತವಾಗಿ ರದ್ದುಪಡಿಸಲಾಯಿತು.

1922: ಸೋವಿಯತ್ ಸಮಾಜವಾದಿ ಗಣರಾಜ್ಯಗಳ ಸಂಘ ಅಧಿಕೃತವಾಗಿ ಸ್ಥಾಪನೆಯಾಯಿತು.

1947: ರೊಮೇನಿಯಾ ರಾಜಶಾಹಿ ರದ್ದು, ದೇಶ ಗಣರಾಜ್ಯವಾಯಿತು.

2006: ಇರಾಕ್‌ನ ಮಾಜಿ ಅಧ್ಯಕ್ಷ ಸದ್ದಾಂ ಹುಸೇನ್‌ಗೆ ಗಲ್ಲುಶಿಕ್ಷೆ ಜಾರಿಗೊಂಡಿತು.

### ಜನನ

1937: ರಾಜೇಶ್ ಖನ್ನಾ, ಹಿಂದಿ ಚಿತ್ರರಂಗದ ಮೊದಲ ಸೂಪರ್‌ಸ್ಟಾರ್

1965: ಟೈಗರ್ ವುಡ್ಸ್, ವಿಶ್ವಪ್ರಸಿದ್ಧ ಗಾಲ್ಫ್ ಆಟಗಾರ

### ಮರಣ

2006: ಸದ್ದಾಂ ಹುಸೇನ್, ಇರಾಕ್‌ನ ಮಾಜಿ ಅಧ್ಯಕ್ಷ

2013: ಎ.ಕೆ. ಹಂಗಲ್, ಪ್ರಸಿದ್ಧ ಹಿಂದಿ ಚಿತ್ರನಟ

# ಸಿನಿಮಾ ಕ್ಷೇತ್ರಕ್ಕೆ ಬ್ರಾಹ್ಮಣರು ನೀಡಿರುವ ಕೊಡುಗೆಗಳು ದಾಖಲಾಗಿಲ್ಲ: ಶ್ರೀಧರಮೂರ್ತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಿನಿಮಾ ರಂಗದಲ್ಲಿ ಬ್ರಾಹ್ಮಣರ ಕೊಡುಗೆಗಳು ಸರಿಯಾಗಿ ದಾಖಲಾಗದೆ ಇತಿಹಾಸದ ಪುಟಗಳಿಂದ ಮರೆಯಾಗುತ್ತಿವೆ ಎಂದು ಚಲನಚಿತ್ರ ವಿಮರ್ಶಕ ಎನ್.ಎಸ್. ಶ್ರೀಧರಮೂರ್ತಿ ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಆವರಣದಲ್ಲಿ ಜಿಲ್ಲಾ ಬ್ರಾಹ್ಮಣ ಸಭಾದಿಂದ ಹಮ್ಮಿಕೊಂಡಿದ್ದ ದ್ವಿತೀಯ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಹಾಗೂ ವಿಶ್ವ ಹಿತ ಚಿಂತಕರ ಸಮಾವೇಶದಲ್ಲಿ ಭಾನುವಾರ ಟಚಲನಚಿತ್ರ, ರಂಗಭೂಮಿಗೆ ವಿಪ್ರರ ಕೊಡುಗೆ ಮತ್ತು ಭವಿಷ್ಯತ್ತಿನಲ್ಲಿ ಅವಕಾಶಗಳುಟ ವಿಚಾರಗೋಷ್ಠಿಯಲ್ಲಿ ಮಾತನಾಡಿ, ಕನ್ನಡದ ಮೊದಲ ವಾಕ್ ಚಿತ್ರ ಟಸತಿ ಸುಲೋಚನಾಟ ನಿರ್ಮಾಣಕ್ಕೆ ನಾಗೇಂದ್ರ ರಾವ್ ಅಡಿಪಾಯ ಹಾಕಿದರು. 1930ರ ದಶಕದಲ್ಲಿ ಬಾಲಿವುಡ್ ಪ್ರವರ್ಧಮಾನದಲ್ಲಿತ್ತಾದರೂ ಕನ್ನಡ ಸಿನಿಮಾ ರಂಗಕ್ಕೆ ಮಾರುಕಟ್ಟೆ ಇಲ್ಲದ್ದರಿಂದ ಸ್ಥಳೀಯವಾಗಿ ಯಾವ ಚಿತ್ರಗಳು ಸೆಟ್ಟೇರುತ್ತಿರಲಿಲ್ಲ. ನಾಗೇಂದ್ರ ರಾವ್ ಅವರು ಹಿಂದಿ ಚಲನಚಿತ್ರಗಳಲ್ಲಿ ಭರವಸೆಯ ಖಳನಟನಾಗಿ ಖ್ಯಾತಿ ಗಳಿಸಿದ್ದರು. ಕನ್ನಡದವರಾಗಿದ್ದ ಅವರಿಗೆ ಮಾತೃಭಾಷೆಯಲ್ಲಿ ಸಿನಿಮಾ ಮಾಡಬೇಕೆಂಬ ಆಸೆ ಹುಟ್ಟಿತ್ತು. ಆದರೆ ಬಂಡವಾಳ ಹೂಡಲು ಯಾರೂ ಮುಂದೆ ಬರಲಿಲ್ಲ. ಮುಂಬೈಯಿಂದ ನೇರವಾಗಿ ಮೈಸೂರು ಅರಮನೆಗೆ ಬಂದ ಅವರು ಮಹಾರಾಜರ ಬಳಿ ಹಣ ಸಂಗ್ರಹಿಸಿದರು, ನಂತರ ಕುಪ್ಪಳ್ಳಿ ರೇಷ್ಮೆ ವ್ಯಾಪಾರಿಗಳಿಂದ ಆರ್ಥಿಕ ಸಹಾಯ ಪಡೆದರು, ಸೇಲಂನ ಎಣ್ಣೆ ವ್ಯಾಪಾರಿಗಳ ಬಳಿಯೂ ಅಂಗಲಾಚಿದರು. ಕನ್ನಡದಲ್ಲಿ ಸಿನಿಮಾ ಮಾಡಲೇಬೇಕೆಂದು ಅವರಿವರ ಬಳಿ ಸಂಗ್ರಹಿಸಿದ ಒಟ್ಟು ಹಣ 15 ಸಾವಿರ ರೂ. ಆಗಿತ್ತು. ಅಷ್ಟು ಕಡಿಮೆ ಹಣಕ್ಕೆ ಸಿನಿಮಾ ಆಗುವುದಿಲ್ಲವೆನ್ನುವುದು ಗೊತ್ತಾದಾಗ ಚಮ್ಮನ್ ಲಾಲ್ ಡುಂಗಾರೆ ಅವರು 25 ಸಾವಿರ ರೂ. ಬಂಡವಾಳ ಹೂಡಿ ಕನ್ನಡದ ಮೊದಲ ವಾಕ್‌ಚಿತ್ರ ನಿರ್ಮಿಸಿದರು. ಆದರೆ, ಸಿನಿಮಾ ನಿರ್ಮಾಪಕರ ಪಟ್ಟಿಯಲ್ಲಿ



ನಾಗೇಂದ್ರ ರಾವ್‌ಗೆ ಸ್ಥಾನ ಸಿಗಲೇ ಇಲ್ಲ. ಹೀಗೆ ಅನೇಕ ಕಡೆಗಳಲ್ಲಿ ಚಲನಚಿತ್ರ ರಂಗದಲ್ಲಿ ಬ್ರಾಹ್ಮಣರನ್ನು ಮೂಲೆಗೆ ತಳ್ಳಿದ್ದಾರೆ. ಎಷ್ಟೋ ಮೊದಲುಗಳಿಗೆ ಬ್ರಾಹ್ಮಣರೇ ಕಾರಣರಾಗಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಬ್ರಾಹ್ಮಣರದ್ದು ಬರೆದ ಇತಿಹಾಸ ಆಗು ಬರೆಯದೆ ಉಳಿದ ಇತಿಹಾಸ ಸಾಕಷ್ಟಿದೆ ಎಂದು ವಿಶ್ಲೇಷಿಸಿದರು.

1945ರಲ್ಲೇ ಕನ್ನಡದ ಮೊದಲ ಆರ್ಕೆಸ್ಟ್ರಾ ತಂಡವನ್ನು ಕಟ್ಟಿದವರು ಸಹ ಬ್ರಾಹ್ಮಣರೇ ಎಂಬುದು ಬಹುತೇಕರಿಗೆ ಗೊತ್ತಿಲ್ಲ. ಚಿತ್ರರಂಗದ ಸಾಹಿತ್ಯ ಲೋಕದ ತ್ರಿಮೂರ್ತಿಗಳಾದ ಚಿ. ಉದಯಶಂಕರ್, ವಿಜಯನರಸಿಂಹ ಹಾಗು ಆರ್.ಎನ್. ಜಯಗೋಪಾಲ್ ಮತ್ತು ಕಣಗಾಲ್ ಪ್ರಭಾಕರ ಶಾಸ್ತ್ರಿಗಳ ಕೊಡುಗೆ ಅಪಾರವಾಗಿದೆ. ಗಾಯನ ದಿಗ್ಗಜರಾದ ಪಿ.ಬಿ. ಶ್ರೀನಿವಾಸ್ ಹಾಗೂ ಎಸ್.ಪಿ. ಬಾಲಸುಬ್ರಹ್ಮಣ್ಯಂ, ಸಂಗೀತ ನಿರ್ದೇಶಕರಾದ ಎಂ. ರಂಗರಾವ್ ಮತ್ತು ಉಪೇಂದ್ರ ಕುಮಾರ್ ಅವರು ನಮ್ಮ ಸಮುದಾಯದವರೇ ಎಂಬುದು ಹೆಮ್ಮೆಯ ವಿಷಯ ಎಂದರು.

ಚಿ. ಉದಯಶಂಕರ್ ಅವರು ಪರಮ ದತ್ತಾತ್ರೇಯ ಭಕ್ತರಾಗಿದ್ದು, ಯಾವುದೇ ಗೀತೆ ಬರೆಯುವ ಮೊದಲು ದತ್ತಾತ್ರೇಯ ಪ್ರಾರ್ಥನೆ ಮಾಡುತ್ತಿದ್ದರು ಎಂಬ ಶ್ರದ್ಧೆಯ ಸಂಗತಿಯನ್ನು ವಿವರಿಸಿದರು. ನಿರ್ದೇಶನ ವಿಭಾಗದಲ್ಲಿ ಹುಣಸೂರು ಕೃಷ್ಣಮೂರ್ತಿ ಅವರು ಬಬ್ರುವಾಹನ ಮತ್ತು ಸತ್ಯಹರಿಶ್ಚಂದ್ರದಂತಹ ಮೇರು ಚಿತ್ರಗಳ ಮೂಲಕ ಅಮರರಾಗಿದ್ದಾರೆ. ಚಿತ್ರರಂಗದಲ್ಲಿರುವ ಬ್ರಾಹ್ಮಣರನ್ನು ಬ್ರಾಹ್ಮಣತ್ವದ ಮೌಲ್ಯಗಳನ್ನು ಉಳಿಸಿಕೊಂಡವರು ಮತ್ತು ಕೇವಲ ಹುಟ್ಟಿನಿಂದ ಬ್ರಾಹ್ಮಣರಾದವರು ಎಂದು ಎರಡು ವರ್ಗಗಳಲ್ಲಿ ವಿಶ್ಲೇಷಿಸಿ, ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುವ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಕಿರುತೆರೆ ನಿರ್ಮಾಪಕ ಹಾಗು ನಟ ಕಿರಣ್ ವಟಿ ಮಾತನಾಡಿ, ರಂಗಭೂಮಿ, ಸಿನಿಮಾ ಹಾಗು ಧಾರಾವಾಹಿ ಕ್ಷೇತ್ರಗಳಲ್ಲಿ ಕೆಲಸ ಮಾಡುವಾಗ ನಮ್ಮ ಸಮುದಾಯದವರೇ ಶೇ. 70ರಷ್ಟು ಮಂದಿ ಇರುತ್ತಾರೆ. ಆದರೆ, ಉಳಿದ ಶೇ. 30ರಷ್ಟು ಜನರ ಹೆಸರು ಮಾತ್ರ ಮುನ್ನೆಲೆಗೆ ಬರುತ್ತದೆ. ಬ್ರಾಹ್ಮಣರು ಸದಾ ಇನ್ನೊಬ್ಬರ ಸಂತೋಷಕ್ಕಾಗಿ ಹಾಗೂ ಹೆಸರಿಗಿಂತ ಹೆಚ್ಚಾಗಿ ಕಲೆಯ ಮೇಲಿನ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ ಎಂದರು.

ಈ ಕ್ಷೇತ್ರಗಳಲ್ಲಿ ನಮ್ಮವರು ಸಾಕಷ್ಟು ಕೆಲಸ ಮಾಡುತ್ತಿದ್ದರೂ ಅವರು ಯಾರೆಂಬುದೇ ಅರಿಯದ ಸ್ಥಿತಿ ಇದೆ. ವಿಪ್ರರು ಹಣ ಅಥವಾ ವೈಯಕ್ತಿಕ ಪ್ರಸಿದ್ಧಿಗಾಗಿ ಕೆಲಸ ಮಾಡದೆ, ಅತ್ಯಂತ ಶ್ರದ್ಧೆಯಿಂದ ಪೂರೈಸುತ್ತಾರೆ. ಪ್ರಸ್ತುತ ಮನೋರಂಜನಾ ಉದ್ಯಮದಲ್ಲಿ ಪ್ರತಿಭಾವಂತ ಲೇಖಕರ ಕೊರತೆ ಎದ್ದು ಕಾಣುತ್ತಿದ್ದು, ಸಮುದಾಯದ ಯುವ ಪ್ರತಿಭೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬರವಣಿಗೆಯ ಕ್ಷೇತ್ರಕ್ಕೆ ಬರಬೇಕೆಂದು ಕರೆ ನೀಡಿದರು.

ಗೋಷ್ಠಿಯ ಅಧ್ಯಕ್ಷತೆಯನ್ನು ಎಂ.ಕೆ. ರಮೇಶ್ ವಹಿಸಿದ್ದರು. ವೇದಿಕೆಯಲ್ಲಿ ಅರಸೀಕೆರೆ ಬ್ರಾಹ್ಮಣ ಸಭಾ ಅಧ್ಯಕ್ಷ ಎಸ್. ರವಿಕುಮಾರ್, ಜಿಲ್ಲಾ ಬ್ರಾಹ್ಮಣ ಸಭಾ ಉಪಾಧ್ಯಕ್ಷ ಎಂ.ಕೆ.ರಮೇಶ್ ಇದ್ದರು.

# ಮನುಷ್ಯ ಸ್ವಭಾವ ವಿಶ್ಲೇಷಣೆಗೆ ಭಗವದ್ಗೀತೆ ಸಹಕಾರಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎಲ್ಲರಿಗೂ ಒಳಿತು ಬಯಸುವ, ಮನುಷ್ಯನ ಸ್ವಭಾವಗಳನ್ನು ವಿಶ್ಲೇಷಿಸುವ ಶ್ರೇಷ್ಠ ಗ್ರಂಥ ಭಗವದ್ಗೀತೆಯನ್ನು ಮಕ್ಕಳಿಗೆ ಬೋಧಿಸುವುದು ಸದ್ಯದ ಅವಶ್ಯಕತೆಯೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಿಕಟಪೂರ್ವ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಕಾಲೇಜು ಮಹಾವಿದ್ಯಾಲಯ ಆವರಣದಲ್ಲಿ ಜಿಲ್ಲಾ ಬ್ರಾಹ್ಮಣ ಸಭಾದಿಂದ ಹಮ್ಮಿಕೊಂಡಿದ್ದ ದ್ವಿತೀಯ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಹಾಗೂ ವಿಶ್ವ ಹಿತ ಚಿಂತಕರ ಸಮಾವೇಶದ ಎರಡನೇ ದಿನವಾದ ಭಾನುವಾರ ಟಕೌಟುಂಬಿಕ ಸವಾಲುಗಳು ಮತ್ತು ಪರಿಹಾರಟ ವಿಚಾರಗೋಷ್ಠಿಯಲ್ಲಿ ಮಾತನಾಡಿ, ಭಗವದ್ಗೀತೆ ಯಾರಿಗೂ ಕೇಡು ಬಯಸುವುದಿಲ್ಲ. ಅದರ ಅರಿವು ಇದ್ದರೂ ಬೇರೆ ಯಾವುದೋ ಕಾರಣಕ್ಕೆ ಅದನ್ನು ವಿರೋಧಿಸುತ್ತಾರೆಂದು ಅಭಿಪ್ರಾಯಪಟ್ಟರು. ನಮ್ಮ ಋಷಿ ಪರಂಪರೆ ಮತ್ತು ಧರ್ಮದ ಆಚರಣೆಯಲ್ಲೇ ಸಮುದಾಯದ ರಕ್ಷಣೆಯಿದೆ. ನಾವು ಧರ್ಮ ಭ್ರಷ್ಟರಾಗದೆ, ಮೌಲ್ಯಯುತ ಜೀವನ ನಡೆಸಿದಾಗ ಸಮಾಜದಲ್ಲಿ ಗೌರವ ಸಿಗಲು ಸಾಧ್ಯ. ಜೀವನ ಸಾಗಿಸುವ ಕ್ರಮವನ್ನು ನಮ್ಮ ಉಪನಿಷತ್ ಹಾಗು ಭಗವದ್ಗೀತೆ ಅದ್ಭುತವಾಗಿ ವಿವರಿಸಿದೆ. ಭಗವದ್ಗೀತೆಯು ಮನುಷ್ಯ ಸ್ವಭಾವದ ಆಳವಾದ ವಿಶ್ಲೇಷಣೆ ಮಾಡುವುದರ ಜೊತೆಗೆ ಸಂಕಷ್ಟದ ಸಮಯದಲ್ಲಿ ಜೀವನವನ್ನು ಎದುರಿಸುವ ಶಕ್ತಿಯನ್ನು ನೀಡುತ್ತದೆ. ಇಂತಹ ಮೌಲ್ಯಗಳನ್ನು ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವುದರಲ್ಲಿ ಯಾವುದೇ ತಪ್ಪಿಲ್ಲ ಎಂದರು.

ಇತ್ತೀಚಿನ ದಿನಗಳಲ್ಲಿ ಕೌಟುಂಬಿಕ ವ್ಯವಸ್ಥೆಗಳು ತೀರಾ ಹದಗೆಡುತ್ತಿವೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮದುವೆಯಾಗುವ ನವ ದಂಪತಿ ಮೂರು ತಿಂಗಳಿಗೆ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ. ಹಾಗಾದರೆ ನಮ್ಮ ಧರ್ಮ ಏನು ಹೇಳಿಕೊಡುತ್ತದೆಂಬುದರ ಬಗ್ಗೆ ಸಂಶಯ ಹುಟ್ಟುತ್ತದೆ. ಈ ರೀತಿಯಾಗಲು ಸಂಸ್ಕಾರ ಇಲ್ಲದಿರುವುದೇ ಕಾರಣ. ನಮ್ಮನ್ನು ನಾವು ತಿದ್ದಿಕೊಳ್ಳಲು ಪ್ರಯತ್ನಿಸದಿದ್ದರೆ ಬದುಕು ಜಟಿಲವಾಗುತ್ತಲೇ ಇರುತ್ತದೆ. ಸಾಮಾಜಿಕ ಜಾಲತಾಣಗಳು ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದ್ದು ಅವುಗಳ ಮೇಲೆ ನಿಯಂತ್ರಣ ಸಾಧಿಸುವ ಅನಿವಾರ್ಯತೆ ಇದೆಯೆಂದರು.

ಪೂರ್ವಜರು ಮಾಡಿದ ಸತ್ಕಾರ್ಯದಿಂದ ನಾವು ನೆಮ್ಮದಿಯ ಬದುಕು ಕಂಡಿದ್ದೇವೆ. ಧರ್ಮ ಪರಿಪಾಲನೆ ಮಾಡಿದರಷ್ಟೇ ನಮ್ಮ ಉಳಿವು ಎಂಬ ಸತ್ಯ ಗೊತ್ತಾಗಬೇಕು. ಸತ್ಕಾರ್ಯ, ಸದ್ವಿಚಾರ ಜೀವನವನ್ನು ಒಳ್ಳೆದ ದಾರಿಯತ್ತ ಕರೆದೊಯ್ಯುತ್ತವೆಂದರು.

### ಸಮತೋಲನವೇ ಜೀವನ ಕಲೆ

ಗೋಷ್ಠಿಯ ವಿಚಾರ ಮಂಡಿಸಿದ ಡಾ. ಶುಭಾ ಮಧುಸೂದನ್ ಅವರು, ಬುದ್ಧಿವಂತಿಕೆ ಹೆಚ್ಚಾದಂತೆ ಅಹಂಕಾರ ಮತ್ತು ಖಿನ್ನತೆ ಮನೆ ಮಾಡುವ ಸಾಧ್ಯತೆಗಳಿರುತ್ತವೆ. ಅದನ್ನು ಸಮತೋಲನದಲ್ಲಿ ಇಟ್ಟುಕೊಳುವುದೇ ಜೀವನದ ಕಲೆ ಎಂದರು.

ಪೋಷಕರು ಹದಿಹರೆಯದ ಮಕ್ಕಳಿಗೆ ಪ್ರಶ್ನೆ ಕೇಳಲು ಮುಕ್ತ ಅವಕಾಶ ನೀಡಬೇಕು ಮತ್ತು ಗಂಡು ಮಕ್ಕಳನ್ನು ಅತಿಯಾದ ವಿಧೇಯರನ್ನಾಗಿ ಬೆಳೆಸದೆ ಅವರಿಗೆ ಧೈರ್ಯವನ್ನು ಕಲಿಸಬೇಕು. ನಮ್ಮ ಪರಂಪರೆಯಲ್ಲಿ ಅಧ್ಯಾತ್ಮ ಮತ್ತು ವಿಜ್ಞಾನ ಬೇರೆಯಲ್ಲ. ಧಾರ್ಮಿಕತೆಯಲ್ಲೇ ವಿಜ್ಞಾನವಿದೆ ಎಂಬುದನ್ನು ಪೋಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ಮಕ್ಕಳು ದಾರಿ ತಪ್ಪಿದಾಗ ಕೇವಲ ಶಿಸ್ತಿನ ಮೂಲಕವಲ್ಲದೆ, ಆತ್ಮೀಯ ಸಂಬಂಧದ ಮೂಲಕ ಅವರನ್ನು ಸರಿಹಾದಿಗೆ ತರಬೇಕೆಂದು ಕಿವಿಮಾತು ಹೇಳಿದರು.

ಬ್ರಾಹ್ಮಣ ಸಮುದಾಯವು ಕೇವಲ ಸೇವೆಯನ್ನೇ ಮಾಡದೆ ವೃತ್ತಿಗೆ ತಕ್ಕ ಬೆಲೆ ಪಡೆಯುವ ಗುಣ ಬೆಳೆಸಿಕೊಳ್ಳಬೇಕು. ಉದ್ಯಮಶೀಲತಾ ಕೌಶಲಗಳನ್ನು ಮೈಗೂಡಿಸಿಕೊಳ್ಳಬೇಕೆಂದರು.

ವೇದಿಕೆಯಲ್ಲಿ ರಾಮಕೃಷ್ಣ ವಿದ್ಯಾಲಯದ ಮುಖ್ಯಸ್ಥೆ ಲಕ್ಷ್ಮಿ, ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಹೆಚ್. ಎಸ್. ಮಂಜುನಾಥಮೂರ್ತಿ, ಉಪಾಧ್ಯಕ್ಷ ಚಂದ್ರಶೇಖರ್, ಹೊಳೆನರಸೀಪುರ ತಾಲ್ಲೂಕು ಅಧ್ಯಕ್ಷ ಕೆ.ಆರ್ .ಜಯಪ್ರಕಾಶ್, ಬಿ.ಎನ್.ರಾಮಪ್ರಸನ್ನ ಪಟ್ಟಾಭಿರಾಮ್ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248